# ಕರ್ನಾಟಕ ಸರ್ಕಾರ

(ಲೋಕೋಪಯೋಗಿ ಇಲಾಖೆ )

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,

ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ.

ಸಂ:ಕಾನಿಇಂ:ಲೋಇ:ಯಾವಿ:ತಾಶಾ–1:2022–23 23 ದಿನಾಂಕ : 7/4/2022

ಇವರಿಗೆ,

ಅಧ್ಯಕ್ಷರು,

ಶ್ರೀ ಚೌಡೇಶ್ವರಿ ಚಾರಿಟಬಲ್ ಮತ್ತು ಶಿಕ್ಷಣ ಸಂಸ್ಥೆ

ಯಾದಗಿರಿ

ಮಾನ್ಯರೆ,

ವಿಷಯ :– ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡುವ ಕುರಿತು.

ಉಲ್ಲೇಖ : 1) ಸರ್ಕಾರದ ಸುತ್ತೋಲೆ ಸಂ:ಲೋಇ:59:ಬಿಇಡಿ:2019:ದಿನಾಂಕ:10–11–2021

2) ತಮ್ಮ ಕಾರ್ಯಾಲಯದ ಪತ್ರ ದಿನಾಂಕ : 22–03–2022

3) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು, ಲೋ.ಇ. ಉಪ–ವಿಭಾಗ ಯಾದಗಿರಿ ಇವರ ಪತ್ರ ಸಂ:999:ದಿನಾಂಕ: 31–03–2022

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಯಾದಗಿರಿ ಜಿಲ್ಲೆಯ ಶ್ರೀ ಚೌಡೇಶ್ವರಿ ಚಾರಿಟೇಬಲ್ ಮತ್ತು ಶಿಕ್ಷಣ ಸಂಸ್ಥೆ ಯಾದಗಿರಿ ಅಡಿಯಲ್ಲಿ ಶ್ರೀ ವಿದ್ಯಾರಣ್ಯ ಇಂಟರನ್ಯಾಷನಲ್ ಶಾಲೆ, ಯಾದಗಿರಿ ನಡೆಸುತ್ತಿರುವ ಶಾಲೆ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಿರುವಂತೆ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಉಪ–ವಿಭಾಗ ಯಾದಗಿರಿ ಇವರು ಸದರಿ ಶಾಲಾ ಕಟ್ಟಡದ ಪರಿಶೀಲನೆ ಮಾಡಿ ಒಂದೇ ಬ್ಲಾಕ್‌ನಲ್ಲಿ ಮೂರು ಮಹಡಿಗಳನ್ನು ಪರಿಶೀಲನೆ ಮಾಡಲಾಗಿದ್ದು ಕಟ್ಟಡವು ಸುರಕ್ಷೀತವಾಗಿದ್ದು, ಸದರಿ ಕಟ್ಟಡದಲ್ಲಿ ಶಾಲೆಯನ್ನು ನಡೆಸಲು ಯೋಗ್ಯವಿರುತ್ತದೆ ಎಂದು ಉಲ್ಲೇಖ ಪತ್ರ(3)ರ ಮೂಲಕ ವರದಿ ನೀಡಿರುತ್ತಾರೆ.

ಸದರಿ ಪರಿವೀಕ್ಷಣೆ ವರದಿ ಅನುಸರಿಸಿ, ತಮ್ಮ ಮನವಿಯಂತೆ ಹಾಗೂ ಉಲ್ಲೇಖ (1)ರ ಸರ್ಕಾರದ ಸುತ್ತೋಲೆಯ ನಿರ್ದೇಶನಗಳನ್ನು ಪಾಲಿಸುವ ಷರತ್ತಿನೊಂದಿಗೆ ಶಾಲಾ ಕಟ್ಟಡದ ಸುರಕ್ಷತೆ ಪ್ರಮಾಣ ಪತ್ರ ನೀಡಲಾಗಿದೆ.

ತಮ್ಮ ವಿಶ್ವಾಸಿ

ಕಾರ್ಯನಿರ್ವಾಹಕ ಇಂಜಿನೀಯರರು,

ಲೋಕೋಪಯೋಗಿ ಇಲಾಖೆ,

ವಿಭಾಗ, ಯಾದಗಿರಿ.

ಪ್ರತಿಯನ್ನು : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಉಪ–ವಿಭಾಗ ಯಾದಗಿರಿ ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.